# ಗುರು ಪುರಂದರ ದಾಸರೇ ನಿಮ್ಮ ಚರಣ ಸರಸಿಜ ನಂಬಿದೆ

(ರಚನೆ : ವಿಜಯ ದಾಸರು ; ಅಂಕಿತ : ವಿಜಯ ವಿಠ್ಠಲ)

ರಾಗ ಹಿಂದುಸ್ತಾನಿ ತಾಳ ಕಾಪಿ

ಗುರು ಪುರಂದರ ದಾಸರೇ ನಿಮ್ಮ ಚರಣ ಸರಸಿಜ ನಂಬಿದೆ || ಪ ||

ಗರುವ ರಹಿತರ ಮಾಡಿ ನಮ್ಮನು ಪೊರೆವ ಭಾರವು ನಿಮ್ಮದೆ || ಅಪ ||

ಒಂದು ಅರಿಯದ ಮಂದಮತಿ ನಾನಿಂದು ನಿಮ್ಮನು ವಂದಿಪೆ
ಇಂದಿರೇಶನ ತಂದು ತೋರಿಸಿ ತಂದೆ ಮಾಡೆಲೊ ಸತ್ಕೃಪೆ || 1 ||

ಪುರಂದರ ಗಡದೊಳಗೆ ನಿಂದು ನಿರುತ ದ್ರುವ್ಯವ ಗಳಿಸಿದೆ
ಪರಮ ಪುರುಷನು ವಿಪ್ರನಂದದಿ ಕರವ ನೀಡಿ ಯಾಚಿಸೆ || 2 ||

ಪರಮ ನಿರ್ಗುಣ ಮನವರಿತು ಹರಿಗೆ ಸೂರೆಯ ನೀಡುತ
ಅರಿತು ಮನದೊಳು ಹರಿದು ಭವಗಳ ತರುಣಿ ಸಹಿತಾ ಹೊರಟನೆ || 3 ||

ಮಾರಜನಕನ ಸನ್ನಿಧಾನದಿ ಸಾರ ಗಾನವ ಮಾಡುವ
ನಾರದರೆ ಈ ರೂಪದಿಂದಲಿ ಚಾರು ದರುಶನ ತೋರಿದ || 4 ||

ಅಜಭವಾದಿಗಳರಸನಾದ ವಿಜಯ ವಿಠ್ಠಲನ ಧ್ಯಾನಿಪ
ನಿಜ ಸುಜ್ಞಾನವ ಕೊಡಿಸಬೇಕೆಂದು ಭಜಿಪೆನೋ ಕೇಳ್ ಗುರುವರ || 5 ||

**Classification:** Keerthane
**Ankita:** Vijaya vittala
**Location:** NA
**Category:** Purandara Namana
**Sub-Category:** Vishnu, narada, brahma, Dhyana, jnana, bhajane, guna, bhava, tande, rokka,
**Pravachana:** NA
**Explanation:** NA